# ನಿರಾಸೆಯ ಕತ್ತಲಲ್ಲಿ ನಂಬಿಕೆಯ ದೀಪ



ರಘು ದೀಕ್ಷಿತ್



ನವೀನ್ ದ್ವಾರಕಾನಾಥ್



ವಾರಿಜಾಶ್ರೀ

ಇಡೀ ಜಗತ್ತು ನಿರಾಸೆಯ ಕಡಲಲ್ಲಿ ಮುಳುಗಿದೆ. ಕೊರೊನಾ ಎಂಬ ಕಂಟಕದ ಕುಣಿತಕ್ಕೆ ದಣಿದಿದೆ. ಇಂಥ ವಾತಾವರಣದಲ್ಲಿ ನಂಬಿಕೆಯ ಬೆಳಕು ಚೆಲ್ಲುವ ಪ್ರಯತ್ನವನ್ನು ನವೀನ್ ದ್ವಾರಕಾನಾಥ್ ಮಾಡುತ್ತಿದ್ದಾರೆ.

ಈ ಹಿಂದೆ 'ಮಹಾತ್ಮ' ಎಂಬ ಕಿರುಚಿತ್ರವನ್ನೂ, ಚುನಾವಣೆಗಳ ಬಗೆಗೆ ಜಾಗೃತಿ ವಿಡಿಯೊಗಳನ್ನೂ ಮಾಡಿದ್ದ ಅವರು ಕಳೆದ ವರ್ಷ ಲಾಕ್‌ಡೌನ್‌ಗಿಂತ ಮೊದಲು ಸಿನಿಮಾ ನಿರ್ದೇಶನಕ್ಕೂ ಇಳಿದಿದ್ದರು. ಇದೀಗ ಒಂದು ವಿಡಿಯೊ ಸಾಂಗ್ ಮೂಲಕ ಜನರಲ್ಲಿ ಜೀವನಪ್ರೀತಿಯ ದೀಪ ಹಚ್ಚಲು ಮುಂದಾಗಿದ್ದಾರೆ.

ನವೀನ್ ಅವರೇ ನಿರ್ಮಾಣ ಮಾಡಿ, ನಿರ್ದೇಶನವನ್ನೂ ಮಾಡುತ್ತಿರುವ ಈ ವಿಡಿಯೊ ಹಾಡಿನ ಹೆಸರು 'ಭರವಸೆ'. ಅನ್ಯರನ್ನು ದೂಷಿಸುತ್ತ, ನಿರಾಸೆಯ ಕಡಲಲ್ಲಿ ಮುಳುಗುವ ಬದಲು ನಂಬಿಕೆಯ ದೋಣಿಯಲ್ಲಿ ಪಯಣಿಸಿ ಎಂಬ ಸಂದೇಶ ಇದರಲ್ಲಿದೆ.

ನವೀನ್ ಸ್ನೇಹಿತ ಹರೀಶ್ ಎಂಬುವವರು ಈ ಹಾಡಿಗೆ ಪದ ಜೋಡಿಸಿದ್ದಾರೆ. ಅವರ ಜೊತೆಗೆ ಸಿದ್ಧಾರ್ಥ್ ಸೇರಿಕೊಂಡು ಸಂಗೀತ ಸಂಯೋಜಿಸಿದ್ದಾರೆ. ರಘು ದೀಕ್ಷಿತ್ ಮತ್ತು ವಾರಿಜಾಶ್ರೀ ಕಂಠದಲ್ಲಿ ಈ ಹಾಡು ಮೂಡಿಬಂದಿದೆ.

ರಂಜನಿ ರಾಘವನ್, ವಸಿಷ್ಠ ಸಿಂಹ, ಪಿ.ಡಿ. ಸತೀಶ್‌ಚಂದ್ರ, ಜೆ.ಕೆ., ಹರ್ಷಿಕಾ ಪೂಣಚ್ಚ, ಚಂದನ್ ಶರ್ಮ ಸೇರಿದಂತೆ ಹಲವು ಕಲಾವಿದರು ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಈ ಎಲ್ಲ ಪ್ರಕ್ರಿಯೆಗಳೂ ನಡೆದಿದ್ದು ಲಾಕ್‌ಡೌನ್ ಅವಧಿಯಲ್ಲಿ ಮತ್ತು ಅವರವರ ಮನೆಯಲ್ಲಿಯೇ ಎನ್ನುವುದು ವಿಶೇಷ.

ಮೂರೂವರೆ ನಿಮಿಷದ ಈ ಹಾಡು ಆನಂದ್ ಆಡಿಯೊ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾಗಿದ್ದು, ಸೋಷಿಯಲ್ ಮೀಡಿಯಾಗಳಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. ■

# ಚಾರ್ಲಿಯ ಬಹುಭಾಷಾ ಪ್ರವಾಸ



'ಅವನೇ ಶ್ರೀಮನ್ನಾರಾಯಣ' ಸಿನಿಮಾ ದೊಡ್ಡ ಮಟ್ಟದಲ್ಲಿ ಸೌಂಡು ಮಾಡುತ್ತಿರಬೇಕಾದರೆ ಸಣ್ಣದಾಗಿ ಶುರುವಾಗಿದ್ದು 'ಚಾರ್ಲಿ 777' ಎಂಬ ಸಿನಿಮಾ. ಕಿರಣ್‌ರಾಜ್ ಕೆ. ಅವರ ನಿರ್ದೇಶನದ ಈ ಸಿನಿಮಾವನ್ನು ಮೊದಲು ರಕ್ಷಿತ್ ನಿರ್ಮಾಣ ಮಾಡುತ್ತಾರೆ ಎಂದು ಸುದ್ದಿಯಾಗಿತ್ತು. ನಂತರ ಅವರೇ ಅದರಲ್ಲಿ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳಲಿರುವುದೂ ಜಾಹೀರಾಯಿತು.

ಬಹುಭಾಷೆಯಲ್ಲಿ ಬಹುದೊಡ್ಡಮಟ್ಟದಲ್ಲಿ ತೆರೆಕಂಡ '...ಶ್ರೀಮನ್ನಾರಾಯಣ'ನ ಗನ್ನಿನಿಂದ ಚಿತ್ರಮಂದಿರದಲ್ಲಿ ಗುಂಡು ನಿರೀಕ್ಷೆಯಂತೆ ಸಿಡಿಯಲೇ ಇಲ್ಲ. ಅಂತೂ ಇಂತು ಎನ್ನುವ ಹಾಗೆ ಒಂದಿಷ್ಟು ದಿನ ಓಡಿ ನಿರ್ಮಾಪಕರ ಹಣೆ ಮೇಲೆ ಚಿಂತೆಯ ಗೆರೆಗಳನ್ನು ಬಿಟ್ಟು ಹಿಂದೆ ಸರಿಯಿತು. ಆಗಿನಿಂದ ಆಗೊಮ್ಮೆ ಈಗೊಮ್ಮೆ ಸಣ್ಣದಾಗಿ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುತ್ತ, ಸಿನಿಮಾ ಬಗ್ಗೆ ಸಣ್ಣ ಸಣ್ಣ ಸುಳಿವುಗಳನ್ನು ಕೊಡುತ್ತ ತನ್ನ ಪಾಡಿಗೆ ತಾನು ಸಜ್ಜುಗೊಳ್ಳುತ್ತಿದ್ದ 'ಚಾರ್ಲಿ 777' ಈಗ ಹೆಡೆಬಿಚ್ಚಿದೆ.

ಇತ್ತೀಚೆಗೆ ಚಾರ್ಲಿಯ ಟೀಸರ್ ರೂಪದಲ್ಲಿ ಬಿಡುಗಡೆಯಾದ 'ಲೈಫ್ ಆಫ್ ಚಾರ್ಲಿ' ಸೋಷಿಯಲ್ ಮೀಡಿಯಾಗಳಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. ಜೊತೆಗೆ ಈ ಸಿನಿಮಾವನ್ನು ಐದು ಭಾಷೆಗಳಲ್ಲಿ ಬಿಡುಗಡೆಗೆ ಮಾಡಲು ಚಿತ್ರತಂಡ ಸಜ್ಜಾಗಿದೆ.

ಯಾಕೋ ರಕ್ಷಿತ್ ಅವರಿಗೆ ಬಹುಭಾಷೆಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ವ್ಯಾಮೋಹ ಹೆಚ್ಚಿದಂತಿದೆ. ಆದರೆ ಮಾರುಕಟ್ಟೆ ಪಂಡಿತರ ಲೆಕ್ಕದಲ್ಲಿ ಇದುವರೆಗೆ ಬಹುಭಾಷೆಯಲ್ಲಿ ಬಿಡುಗಡೆಯಾದ ಸಿನಿಮಾಗಳು ಕನ್ನಡ ಬಿಟ್ಟು ಬೇರೆ ಭಾಷೆಗಳಲ್ಲಿ ಸದ್ದು ಮಾಡಿದ್ದು ತುಂಬ ಕಡಿಮೆಯೇ. ಆದರೆ ಚಾರ್ಲಿಯ ಕುರಿತು ರಕ್ಷಿತ್‌ಗೆ ಪ್ರೀತಿಯ ಜೊತೆಗೆ ಗಟ್ಟಿ ನಂಬಿಕೆಯೂ ಇರುವಂತಿದೆ. ಹಾಗಾಗಿ ಕನ್ನಡೇತರ ಪ್ರೇಕ್ಷಕರೆದುರು ಚಾರ್ಲಿಯನ್ನು ಕೊಂಡೊಯ್ಯಲು ನಿರ್ಧರಿಸಿದ್ದಾರೆ. 'ಶ್ರೀಮನ್ನಾರಾಯಣ' ಚೆಲ್ಲಿದ ಕೈಯನ್ನು ಚಾರ್ಲಿಯಾದರೂ ಹಿಡಿಯುತ್ತಾನಾ ನೋಡಬೇಕು. ■